# ಹಾಸನ ಜಿಲ್ಲೆಯ ಸಂಕ್ಷಿಪ್ತ ಪಕ್ಷಿನೋಟ

# ಹಾಸನ ಜಿಲ್ಲೆಯ ಕಿರು ಪರಿಚಯ

ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಹಿತಕರವಾದ ಹವಾಗುಣವನ್ನು ಹೊಂದಿರುವ ಹಾಸನ ಜಿಲ್ಲೆ "ಬಡವರ ಊಟಿ" ಎಂದು ಪ್ರಸಿದ್ಧಿಯಾಗಿದೆ. ಹಾಸನ ಜಿಲ್ಲೆಯ ಮಲೆನಾಡು ಭಾಗವು ಸ್ವಾಭಾವಿಕ ದಟ್ಟವಾದ ಅರಣ್ಯಗಳಿಂದ ಕೂಡಿದ್ದು ಜಿಲ್ಲೆಯ ಮಂಜರಾಬಾದ್(ಸಕಲೇಶಪುರ) ತಾಲ್ಲೂಕಿನ ಕಬ್ಬಿನಾಲೆ, ಕೆಂಪುಹೊಳೆ, ಕಾಗಿನೇರಿ ಮತ್ತು ಬಿಸಲೆ ಅರಣ್ಯಗಳು ದಕ್ಷಿಣ ಕನ್ನಡ ಜಿಲ್ಲೆಯವರೆಗೂ ವಿಸ್ತರಿಸಿ ಪ್ರಕೃತಿಯ ಆರಾಧಕರನ್ನು ಕೈ ಬೀಸಿ ಕರೆಯುತ್ತಿವೆ. ರಾಜ್‌ರಾಮ್‌ರವರ 'ಕಾಂತಾಪುರ' ಕಾದಂಬರಿ ಹಾಸನದ ಸಕಲೇಶಪುರ ತಾಲ್ಲೋಕಿನ ಪ್ರಾದೇಶಿಕ ವೈಶಿಷ್ಟತೆಯನ್ನೊಳಗೊಂಡಿದೆ, ಹೇಮಾವತಿಯು ಈ ಜಿಲ್ಲೆಯ ಮುಖ್ಯ ನದಿಯಾಗಿ ಕೃಷಿಕರ ಬಾಳಿನ ವರಪ್ರಸಾದವಾಗಿದೆ. ಯಗಚಿ ನದಿಯು ಹೇಮಾವತಿ ನದಿಯ ಉಪನದಿಯಾಗಿದ್ದು ಬೇಲೂರು ತಾಲ್ಲೂಕು ಕೃಷಿಕರ ಜೀವನಾಡಿಯಾಗಿದೆ ಮತ್ತು ಹಾಸನ ಜಿಲ್ಲೆಯ ರಾಮನಾಥಪುರದಲ್ಲಿ ಕಾವೇರಿ ನದಿಯ ಹರಿಯುವಿಕೆಯಿಂದ ಆ ಭಾಗದ ಕೃಷಿ ಚಟುವಟಿಕೆಗಳಿಗೆ ಚಾಲನೆ ನೀಡಿದೆ. ನಾಲ್ಕುನೂರು ವರ್ಷಗಳ ಕಾಲ ಕರ್ನಾಟಕವನ್ನಾಳಿದ ಹೊಯ್ಸಳ ದೊರೆಗಳಿಗೆ ಆಶ್ರಯ ನೀಡಿದ ತಾಣ ಹಾಸನ ಜಿಲ್ಲೆಯಾಗಿದೆ. ಕಲೆಗಳ ತವರೂರಾಗಿರುವ ಬೇಲೂರು, ಹಳೇಬೀಡು, ಕೋರವಂಗಲ, ಮೊಸಳೆಹೊಸಹಳ್ಳಿ ಮುಂತಾದ ದೇವಾಲಯಗಳು ಜಗತ್ತಿನ ಕಣ್ಮನ ಸೆಳೆದು ಅನೇಕ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಹತ್ತನೆ ಶತಮಾನದಲ್ಲಿ ಗಂಗರಸ ಮಹಾಮಂತ್ರಿ ಚಾವುಂಡರಾಯನಿಂದ ಪ್ರೇರಕಗೊಂಡು ನಿರ್ಮಾಣವಾದ 58 ಅಡಿ ಎತ್ತರದ ಜಗತ್ಪ್ರಸಿದ್ದ ಶ್ರವಣಬೆಳಗೂಳದ ಗೊಮ್ಮಟೇಶ್ವರ ವಿಗ್ರಹ ಅಪೂರ್ವ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಕ್ರಿಸ್ತ ಪೂರ್ವದ ಆದಿಯಲ್ಲಿ ಮೌರ್ಯ ವಂಶದ ಚಕ್ರವರ್ತಿಯಾದ ಚಂದ್ರಗುಪ್ತ ಮೌರ್ಯನು ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಅಲ್ಲಿಯೇ ನಿರ್ವಾಣ ಹೊಂದಿದ ಬಗ್ಗೆ ಐತಿಹ್ಯವಿದೆ. ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮವೆನಿಸಿದ 'ಹಲ್ಮಿಡಿಶಾಸನ'ವಿರುವುದು ಈ ಜಿಲ್ಲೆಯಲ್ಲಿಯೇ.

ಹಾಸನ ಜಿಲ್ಲೆಯು ವಿಶಿಷ್ಟವಾದ ಭೌಗೋಳಿಕ ಹಿನ್ನಲೆ ಮತ್ತು ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದ ಜಿಲ್ಲೆಯಾಗಿದ್ದು. ಭೌಗೋಳಿಕ ವಿಸ್ತೀರ್ಣದ ದೃಷ್ಠಿಯಿಂದ ರಾಜ್ಯದಲ್ಲಿ ಇದು 15 ನೇ ಸ್ಥಾನ ಪಡೆದುಕೊಂಡಿದೆ. ಸಕಲೇಶಪುರ ಪೂರ್ಣಮಲೆನಾಡು ಪ್ರದೇಶಗಳನ್ನು ಹೊಂದಿದ್ದು, ಬೇಲೂರು, ಆಲೂರು, ಅರಕಲಗೂಡು ತಾಲ್ಲೂಕುಗಳು ಅರೆಮಲೆನಾಡು ಹಾಗೂ ಅರಸೀಕೆರೆ, ಚನ್ನರಾಯಪಟ್ಟಣ ಹಾಸನ ಮತ್ತು ಹೊಳೆನರಸೀಪುರ ತಾಲ್ಲೂಕುಗಳು ಬಯಲುಸೀಮೆ ಪ್ರದೇಶಕ್ಕೆ ಸೇರಿವೆ.

ಹಾಸನ ಜಿಲ್ಲೆಗೆ ಇದ್ದ ಮತ್ತೊಂದು ಹೆಸರೇ 'ಸಿಂಹಾಸನಪುರ' ಧಾರ್ಮಿಕವಾಗಿ ಈ ಜಿಲ್ಲೆ ಅತ್ಯಂತ ಪ್ರಸಿದ್ಧವಾಗಿದ್ದು ವರ್ಷಕ್ಕೊಮ್ಮೆ ನಡೆಯುವ ಹಾಸನಾಂಬದೇವಿ ದರ್ಶನ ಖ್ಯಾತಿಯನ್ನು ಪಡೆದಿದೆ. ಬೇಲೂರು ಚನ್ನಕೇಶವ ದೇವಾಲಯ ಹಳೇಬೀಡಿನ ದೇವಾಲಯಗಳು, ಅರಸೀಕೆರೆಯ ಚಿಕ್ಕತಿರುಪತಿ ದೇವಾಲಯ, ಜೇನುಕಲ್ಲು ಸಿದ್ದೇಶ್ವರ ದೇವಾಲಯ, ಕೋಡಿಮಠ, ರಾಮನಾಥಪುರ ದೇವಾಲಯಗಳು ಆಲೂರು ತಾಲ್ಲೂಕಿನ ಕೆಂಚಾಂಬ ದೇವಾಲಯ ಹಾಗೂ ಆಧ್ಯಾತ್ಮಕತೆಗೆ ಹೆಸರಾದ ಶ್ರವಣಬೆಳಗೂಳ ಗೊಮ್ಮಟೇಶ್ವರ ಮತ್ತು 12 ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ಮಹಾಮಸ್ತಾಕಭಿಷೇಕ ವಿಶ್ವ ವಿಖ್ಯಾತಿಯಾಗಿದೆ.

ಸಾಹಿತ್ಯ ಸಂಸ್ಕೃತಿ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಹಾಸನ ಜಿಲ್ಲೆ ವಿಶ್ವದ ಭೂಪಟದಲ್ಲಿ ತನ್ನ ನೆಲೆಯನ್ನು ಗುರುತಿಸಿಕೊಂಡಿದೆ. 'ಕಲೆಗಳ ತವರು' ಎಂದೇ ಹೆಸರಾಗಿರುವ ಜಗತ್ಪ್ರಸಿದ್ಧ ಬೇಲೂರು, ಹಳೇಬೀಡು, ಕೋರವಂಗಲ ದೇವಾಲಯಗಳು ಅಪೂರ್ವ ವಾಸ್ತುಶಿಲ್ಪ ಹಾಗೂ ಆಧ್ಯಾತ್ಮಿಕತೆಗೆ ಪ್ರಸಿದ್ಧವಾಗಿದೆ. ಗೊಮ್ಮಟೇಶ್ವರ ವಿಗ್ರಹ ಈ ಜಿಲ್ಲೆಯಲ್ಲಿದೆ. ಇಲ್ಲಿನ ಬಾಹ್ಯಕಾಶ ನಿಯಂತ್ರಣ ಕೇಂದ್ರವು ವಿಶ್ವ ವಿಜ್ಞಾನದ ವಿಸ್ಮಯಗಳಲ್ಲಿ ಒಂದಾಗಿದೆ. ಜಗತ್ತಿನ ಯಾವುದೇ ಭಾಗದಲ್ಲಿ ಉಪಗ್ರಹಗಳು ಉಡಾವಣೆಗೊಂಡರೂ ಅವುಗಳನ್ನು ಈ ಕೇಂದ್ರವು ನಿಯಂತ್ರಿಸುತ್ತದೆ.

ಕನ್ನಡ ಸಾಹಿತ್ಯಕ್ಕೆ ಶ್ರೀಮಂತಿಕೆಯನ್ನು, ಹಿರಿಮೆಯನ್ನು ಹಾಸನದ ಸಾಹಿತಿಗಳು ತಂದು ಕೊಟ್ಟಿದ್ದಾರೆ. ಹಾಸನದ ರಾಜ್‌ರಾವ್ ಅವರ ಕಾದಂಬರಿಗಳು ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿವೆ. ಅಲ್ಲದೇ ಗೊರೂರು ರಾಮಸ್ವಾಮಿಅಯ್ಯಂಗಾರ್, ಎಸ್.ವಿ.ರಂಗಣ್ಣ. ಎಲ್.ಗುಂಡಪ್ಪ, ಆ.ನ.ಕೃ, ಮತಿಗಟ್ಟ ಕೃಷ್ಣಮೂರ್ತಿ, ಕರೀಂಖಾನ್, ಕೆ.ಕೃಷ್ಣಮೂರ್ತಿ, ಎಸ್.ಎಲ್.ಭೈರಪ್ಪ, ಹಾರ್‍ನಹಳ್ಳಿ ರಾಮಸ್ವಾಮಿ, ಪಂಡಿತ್‌ಸ್ವಾಮಿಗೌಡ, ಕೃನ.ಮೂರ್ತಿ, ಹೆಚ್.ಬಿ.ಜ್ವಾಲನಯ್ಯ, ಮುಂತಾದ ಹಿರಿಯ ಲೇಖಕರು ಈ ನೆಲದೊಡಲ ಚೇತನರಾಗಿ ಹೊರಹೊಮ್ಮಿದ್ದಾರೆ. ಅನೇಕ ರಾಜಕೀಯ ಗಣ್ಯರನ್ನು ರಾಜ್ಯಕ್ಕೆ ಮತ್ತು ದೇಶಕ್ಕೆ ಕೊಡುಗೆಯಾಗಿ ನೀಡಿದ್ದು ಶ್ರೀ.ಹೆಚ್.ಡಿ.ದೇವೇಗೌಡ ಅವರಂಥ ರಾಜಕೀಯ ಮುತ್ಸದ್ದಿಯನ್ನು ದೇಶದ ಪ್ರಧಾನಮಂತ್ರಿಯನ್ನಾಗಿ ಅರ್ಪಿಸಿದ ಕೀರ್ತಿಗೆ ಈ ಜಿಲ್ಲೆ ಪಾತ್ರವಾಗಿದೆ.

ಹಾಸನ ಶೈಕ್ಷಣಿಕ ಜಿಲ್ಲೆಯು ತನ್ನ ವ್ಯಾಪ್ತಿಯಲ್ಲಿ 8 ತಾಲ್ಲೂಕು, 38 ನಾಡಕಛೇರಿಗಳು, 38 ಹೋಬಳಿಗಳು, 406 ಗ್ರಾಮಲೆಕ್ಕಿಗರ ವೃತ್ತ, 266 ಗ್ರಾಮ ಪಂಚಾಯಿತಿಗಳು, 7 ವಿಧಾನ ಸಭಾ ಮತ ಕ್ಷೇತ್ರ, ಲೋಕಸಭಾ ಸದಸ್ಯರ ಸಂಖ್ಯೆ 01, ವಿಧಾನ ಪರಿಷತ್ ಸದಸ್ಯರ ಸಂಖ್ಯೆ 02, ವಿಧಾನಸಭಾ ಸದಸ್ಯರ ಸಂಖ್ಯೆ 07, ಚುನಾಯಿತ ಸದಸ್ಯರ ಸಂಖ್ಯೆ 40, ತಾಲ್ಲೂಕು ಪಂಚಾಯತ ಅಧ್ಯಕ್ಷರು 08,

ಬೆಂಗಳೂರಿನಿಂದ 180 ಕಿ.ಮೀ ದೂರದಲ್ಲಿರುವ ಹಾಸನ ಜಿಲ್ಲೆಯಲ್ಲಿ 8 ತಾಲ್ಲೂಕುಗಳಿವೆ. ಜಿಲ್ಲೆಯು ಮಂಗಳೂರು, ಚಿಕ್ಕಮಗಳೂರು, ತುಮಕೂರು, ಮಂಡ್ಯ, ಮೈಸೂರು ಮತ್ತು ಕೊಡಗು ಜಿಲ್ಲೆಗಳಿಂದ ಆವೃತಗೊಂಡಿದೆ. ಏಪ್ರಿಲ್ 2015ರಲ್ಲಿ 24581 ಶಾಲಾ ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿರುತ್ತಾರೆ. 1004 ಲಿಂಗಾನುಪಾತ ಹಾಗೂ 251 ಜನಸಂಖ್ಯಾ ಸಂದಣಿ ಹೊಂದಿದ್ದು, ಸಾಕ್ಷರತಾದರ 60.67% ರಷ್ಟಿದ್ದು ಸುಧಾರಿತ ಸ್ಥಿತಿಯಲ್ಲಿದೆ.ಏಪ್ರಿಲ್ 2014ರಲ್ಲಿ ಹಾಸನ ಜಿಲ್ಲೆಯು 85.54%ಫಲಿತಾಂಶ ಪಡೆದು ರಾಜ್ಯದಲ್ಲಿ 14ನೇ ಸ್ಥಾನ ಪಡೆದಿತ್ತು. ಏಪ್ರಿಲ್ 2015ರ ಪರೀಕ್ಷೆಯಲ್ಲಿ 87.21% ಫಲಿತಾಂಶ ಪಡೆದು 15ನೇ ಸ್ಥಾನದಲ್ಲಿದೆ. ಏಪ್ರಿಲ್–2016 ರಲ್ಲಿ ನಡೆದ ಪರೀಕ್ಷೆಯಲ್ಲಿ ಶೇ.75.92 ಫಲಿತಾಂಶ ಪಡೆಯುವುದರೊಂದಿಗೆ 26ನೇ ಸ್ಥಾನದಲ್ಲಿದೆ. ಏಪ್ರಿಲ್–2017 ರಲ್ಲಿ ನಡೆದ ಪರೀಕ್ಷೆಯಲ್ಲಿ ಶೇ.69.58 ಫಲಿತಾಂಶ ಪಡೆಯುವುದರೊಂದಿಗೆ 31ನೇ ಸ್ಥಾನಕ್ಕೆ ಕುಸಿದಿದೆ.ಫಲಿತಾಂಶದಲ್ಲಿ ಶೇ.6.34 ರಷ್ಟು ಇಳಿಕೆ ಕಂಡುಬಂದಿದ್ದು ಜಿಲ್ಲೆಯು ಉತ್ತಮ ಸಾಧನೆಯನ್ನು ಮಾಡಬೇಕಾಗಿದೆ.ಆದರೆ ರಾಜ್ಯ ಮಟ್ಟದಲ್ಲಿನ ಸ್ಥಾನದಲ್ಲಿ 24 ರಿಂದ 31 ನೇ ಸ್ಥಾನಕ್ಕೆ ಕುಸಿತ ಕಂಡುಬಂದಿದ್ದು ಎಲ್ಲಾ ಅನುಷ್ಠಾನಾಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳುವಂತಾಗಿದೆ.ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಅಗತ್ಯತೆ ಇದೆ. ಜಿಲ್ಲೆ ಇನ್ನೂ ಉತ್ತಮ ಸಾಧನೆ ಮಾಡಲು ಅವಕಾಶವಿದ್ದು ಈ ನಿಟ್ಟಿನಲ್ಲಿ ಉಪನಿರ್ದೇಶಕರು,ಶಿಕ್ಷಣಾಧಿಕಾರಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು,ವಿಷಯ ಪರಿವೀಕ್ಷಕರು,ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಎಲ್ಲಾ ಹಿರಿಯ ಮತ್ತು ಕಿರಿಯ ಉಪನ್ಯಾಸಕರು ಮುಖ್ಯಶಿಕ್ಷಕರು ಹಾಗೂ ಎಲ್ಲಾ ಹಂತದ ಅನುಷ್ಠಾನಾಧಿಕಾರಿಗಳು ಕಾರ್ಯೋನ್ಮುಖರಾಗಬೇಕಾಗಿದೆ.ಜಿಲ್ಲೆಯಲ್ಲಿ ಕಂಡುಬಂದಿರುವ ಫಲಿತಾಂಶ ಹೆಚ್ಚಿನ ಸಮಾಧಾನ ನೀಡಿಲ್ಲವಾದ್ದರಿಂದ ಹೆಚ್ಚಿನ ಅನುತ್ತೀರ್ಣತೆಗೆ ಕಾರಣಗಳನ್ನು ಗುರುತಿಸಿ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ.ಮುಖ್ಯ ಶಿಕ್ಷಕರ ಸಭೆಗಳು,ಕಾರ್ಯಾಗಾರಗಳು,ಸಂದರ್ಶನ ಮತ್ತು ಶಾಲಾ ಭೇಟಿ ಸಂದರ್ಭದಲ್ಲಿ ಎಲ್ಲಾ ಅನುಷ್ಠಾನಾಧಿಕಾರಿಗಳು ಜಿಲ್ಲೆಯ ಫಲಿತಾಂಶವನ್ನು ಗಮನದಲ್ಲಿರಿಸಿಕೊಂಡು ಫಲಿತಾಂಶ ಉತ್ತಮಪಡಿಸಿಕೊಳ್ಳುವಲ್ಲಿ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶ್ರಮಿಸಬೇಕಾಗಿದೆ. ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿವಿಧ ಹಂತದ ಉಸ್ತುವಾರಿ ಅಧಿಕಾರಿಗಳು ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳನ್ನು ದತ್ತು ತೆಗೆದುಕೊಂಡು ವರ್ಷದ ಪ್ರಾರಂಭದಿಂದಲೇ ಮೇಲ್ವಿಚಾರಣೆ ಮಾಡಿ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಬೇಕಾಗಿದೆ. ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಆಗಿರುವ ಪ್ರಗತಿ ಬಗ್ಗೆ ಗಮನಿಸಿ ಸಲಹೆ ಸೂಚನೆ ಮತ್ತು ಮಾರ್ಗದರ್ಶನ ನೀಡುವುದು ಅವಶ್ಯಕವಾಗಿದೆ. ಹತ್ತನೇ ತರಗತಿಗೆ ಬರುವ ವಿದ್ಯಾರ್ಥಿಗಳಿಗೆ ವಿವಿಧ ಕಾರ್ಯಕ್ರಮಗಳ ಮೂಲಕ ಫಲಿತಾಂಶ ವೃದ್ಧಿಗಾಗಿ ಒತ್ತಡ ಹಾಕುವುದರ ಬದಲು ಅದೇ ಕಾರ್ಯಕ್ರಮಗಳನ್ನು ವಿದ್ಯಾರ್ಥಿ ಪ್ರೌಢಶಿಕ್ಷಣಕ್ಕೆ ದಾಖಲಾಗುವ ಎಂಟನೇ ತರಗತಿಯಿಂದ ಪ್ರಾರಂಭಿಸಿದರೆ ಗುಣಾತ್ಮಕ ಶಿಕ್ಷಣದೊಂದಿಗೆ ಪರಿಮಾಣಾತ್ಮಕ ಶಿಕ್ಷಣವನ್ನು ಪಡೆಯಬಹುದು. ಈ ದಿಸೆಯಲ್ಲಿ ಎಲ್ಲಾ ಎಲ್ಲಾ ಹಂತದ ಅನುಷ್ಠಾನಾಧಿಕಾರಿಗಳು ಕಾರ್ಯೋನ್ಮುಖರಾಗಬೇಕಾಗಿದೆ.ಕೆಲವು ಅನುದಾನಿತ ಶಾಲೆಗಳಲ್ಲಿ ನಿವೃತ್ತಿಯಾಗುವ ಸ್ಥಾನಗಳಿಗೆ ಆಡಳಿತ ಮಂಡಳಿಯವರು ಶಿಕ್ಷಕರನ್ನು ನೇಮಿಸಿಕೊಳ್ಳದಿರುವುದು ಅನುದಾನಿತ ಶಾಲೆಗಳಲ್ಲಿನ ಫಲಿತಾಂಶ ಕಡಿಮೆಯಾಗಲು ಕಾರಣವಾಗಿದೆ.ಅನುದಾನಿತ ಶಾಲೆಗಳ ಆಡಳಿತ ಮಂಡಳಿಯ ವಿವಾದಗಳು ನೇರವಾಗಿ ಫಲಿತಾಂಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

ಸನ್2011ರ ಜನಗಣತಿಯ ಪ್ರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣ 76.07 ರಷ್ಟು ಪುರುಷ ಸಾಕ್ಷರರು 83.64 ರಷ್ಟು ಮಹಿಳಾ ಸಾಕ್ಷರರು ಒಟ್ಟು 68.6 ರಷ್ಟು ಸಾಕ್ಷರತೆಯನ್ನು ಹೊಂದಿದೆ.

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಜಿಲ್ಲೆ, ಹಾಸನ
E-mail Id :ddpi.edu.karhsn@nic.in Telephone No : 08172-268234

---

# ಹಾಸನ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷೀಪ್ತ ವಿವರ

## 1) ಉಪನಿರ್ದೇಶಕರ ಕಛೇರಿಯ ಸಿಬ್ಬಂದಿ ವಿವರ

| ಕ್ರ.ಸಂ | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಉಪನಿರ್ದೇಶಕರು | 1 | 1 | 0 |
| 2 | ಶಿಕ್ಷಣಾಧಿಕಾರಿಗಳು | 2 | 2 | 0 |
| 3 | ಡಿವೈಪಿಸಿ ಎಸ್.ಎಸ್.ಎ ಹಾಸನ | 1 | 1 | 0 |
| 4 | ಡಿವೈಪಿಸಿ ಆರ್.ಎಂ.ಎಸ್.ಎ ಹಾಸನ | 1 | 0 | 1 |
| 5 | ಶಿಕ್ಷಣಾಧಿಕಾರಿಗಳು(ಮ.ಉ.ಯೋ) | 1 | 1 | 0 |
| 6 | ವಿಷಯ ಪರಿವೀಕ್ಷಕರು | 5 | 5 | 0 |
| 7 | ಎಪಿಸಿ | 2 | 2 | 0 |
| 8 | ವೃತ್ತಿ ವಿಷಯ ಪರಿವೀಕ್ಷಕರು | 1 | 1 | 0 |
| 9 | ವ್ಯವಸ್ಥಾಪಕರು | 1 | 0 | 1 |
| 10 | ಅಧೀಕ್ಷಕರು | 5 | 5 | 0 |
| 11 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 1 | 1 | 0 |
| 12 | ಪ್ರ.ದ.ಸ | 16 | 16 | 0 |
| 13 | ಶೀಘ್ರ ಲಿಪಿಗಾರರು | 1 | 0 | 1 |
| 14 | ದ್ವಿ.ದ.ಸ | 5 | 5 | 0 |
| 15 | ದ್ವಿ.ದ.ಸ ಸಹಿತ ಬೆರಳಚ್ಚುಗಾರರು | 1 | 1 | 0 |
| 16 | ಬೆರಳಚ್ಚುಗಾರ | 3 | 1 | 2 |
| 17 | ಡಿ ದರ್ಜೆ | 10 | 7 | 3 |
|  | ಒಟ್ಟು | 57 | 49 | 8 |

## 2) ಶಾಲೆಗಳ ವಿವರ:-

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 2269 | 241 | 2510 |
| ಸಮಾಜ ಕಲ್ಯಾಣ ಇಲಾಖೆ | 45 | 28 | 73 |
| ಸ್ಥಳೀಯ ಸಂಸ್ಥೆ | 0 | 0 | 0 |
| ಅನುದಾನಿತ | 54 | 133 | 187 |
| ಅನುದಾನ ರಹಿತ | 299 | 130 | 429 |
| ಸೆಂಟ್ರಲ್ | 2 | 2 | 4 |
| ಒಟ್ಟು | 2669 | 534 | 3203 |

### 3)ಮಕ್ಕಳ ವಿವರ (ಕೆ.ಡಿ.ಪಿ):-ಅಕ್ಟೋಬರ್2017

| ಶಾಲೆಗಳ ವಿಧ | ಮಕ್ಕಳ ದಾಖಲಾತಿ | ಹಾಜರಾತಿ | ಶೇ. ಹಾಜರಿ |
|---|---|---|---|
| 1 ರಿಂದ 5 | 110101 | 109751 | 99.68 |
| 6 ರಿಂದ 8 | 66509 | 66309 | 99.70 |
| 9 ರಿಂದ 10 | 45133 | 45003 | 99.71 |
| 1 ರಿಂದ 10 | 221743 | 221063 | 99.69 |

### 4)ಶಿಕ್ಷಕರ ಹುದ್ದೆಗಳು ಮಂಜೂರಿ ಮತ್ತು ಖಾಲಿ ಹುದ್ದೆಗಳ ವಿವರ:-

| ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 8099 | 6414 | 1685 |
| ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು | 2241 | 1848 | 393 |
| ಒಟ್ಟು | 10340 | 8262 | 2078 |
| | | | |

**5) 2017-18 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:-**

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 1685 ಹುದ್ದೆಗಳಲ್ಲಿ ಅರಕಲಗೂಡು 30 ಸಕಲೇಶಪುರ 35 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.
2. ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 203 ಹುದ್ದೆಗಳಲ್ಲಿ 54 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.

**6) ಸನ್ 2017-18ನೇ ಸಾಲಿಗೆ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರು (ಎಜಿಟಿ) 109 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಕ್ರಮಕೈಕೊಳ್ಳಲಾಗಿದೆ.**

**7) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫಲಿತಾಂಶ ವಿವರ.**

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿ ಶತ ಸಾದನೆ | ರಾಜ್ಯ ಮಟ್ಟದ ರ್‍ಯಾಂಕ್ |
|---|---|---|---|---|
| 2015-16 | 22145 | 16815 | 75.93 | 26 |
| 2016-17 | 21249 | 14785 | 69.58 | 31 |